# ಅನುಬಂಧ ಭಾಗ

# ಪರಿಶುದ್ಧಾತ್ಮನನ್ನು ಹೊಸ ಒಡಂಬಡಿಕೆಯು ಹೇಗೆ ಉಲ್ಲೇಖಿಸುತ್ತದೆ?

ಪರಿಶುದ್ಧಾತ್ಮನನ್ನು ಕುರಿತು ಬೈಬಲಿನ ಬೋಧನೆಯನ್ನು ನಾವು ಗ್ರಹಿಸಿಕೊಳ್ಳಬೇಕೆಂದರೆ ಪರಿಶುದ್ಧಾತ್ಮನಿಗೆ ಅನ್ವಯಿಸಲ್ಪಟ್ಟ ವಿವಿಧ ಮಾತುಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯವಾಗಿದೆ. ಹೊಸ ಒಡಂಬಡಿಕೆಯಲ್ಲಿ ಆತನು ಉಲ್ಲೇಖಿಸಲ್ಪಟ್ಟ ಕೆಲವು ವಿಧಾನಗಳು ಇಲ್ಲಿವೆ.

**ಆತ್ಮ**

"ಯೇಸು ಪರಿಶುದ್ಧಾತ್ಮಭರಿತನಾಗಿ ಯೊರ್ದನ್ ಹೊಳೆಯಿಂದ ಹಿಂತಿರುಗಿ ದೇವರಾತ್ಮನಿಂದ ... ನಡಿಸಲ್ಪಟ್ಟನು" ಎಂದು ಲೂಕನು ಬರೆದನು (ಲೂಕ 4:1). ಪ್ರತ್ಯಕ್ಷವಾಗಿ, ಆತನನ್ನು ನಡಿಸಿದ ಆತ್ಮನು ಪರಿಶುದ್ಧಾತ್ಮನೇ ಆಗಿದ್ದನು.

ಪರಿಶುದ್ಧಾತ್ಮನು ದೂಷಣೆಗೆ ಸಂಬಂಧಿಸಿ ಮತ್ತಾಯ 12:31 "ಆತ್ಮ" ಎಂದು ಹೇಳುವಲ್ಲಿ, ಮಾರ್ಕ 3:29ರಲ್ಲಿ "ಪರಿಶುದ್ಧಾತ್ಮ" ಎಂದು ಹೇಳಲ್ಪಟ್ಟಿದೆ (ಹಳೇ ಒಡಂಬಡಿಕೆಯಲ್ಲಿ "ಆತ್ಮ" ಎಂಬುದು ಪರಿಶುದ್ಧಾತ್ಮನಿಗೆ ಸಂಬಂಧಿಸಿ ಅನೇಕ ಸಲ ಉಪಯೋಗಿಸಲ್ಪಟ್ಟಿದೆ. - ಉದಾಹರಣೆಯಾಗಿ, ಅರಣ್ಯಕಾಂಡ 11:17, 25-29; 27:18).

**ತಂದೆಯ ಆತ್ಮ**

ಅಪೊಸ್ತಲರನ್ನು ಪ್ರೇರೇಪಿಸಿದಾತನ ಬಗ್ಗೆ ಉಲ್ಲೇಖಿಸುವಾಗ ಮಾರ್ಕ 13:11 "ಪರಿಶುದ್ಧಾತ್ಮ" ಎಂದು ಉಪಯೋಗಿಸುವಾಗ, ಮತ್ತಾಯ 10:20 "ನಿಮ್ಮ ತಂದೆಯ ಆತ್ಮ" ಎಂದು ಉಪಯೋಗಿಸುತ್ತದೆ. ("ತಂದೆಯ ಆತ್ಮ" ಎಂಬುದು ಹಳೇ ಒಡಂಬಡಿಕೆಯಲ್ಲಿ ಕಂಡು ಬರುವದಿಲ್ಲ.)

**ದೇವರ ಆತ್ಮ**

ಯೇಸುವು ಬಾಪ್ತಿಸ್ಮ ಹೊಂದಿದಾಗ ಆತನ ಮೇಲೆ ಪರಿಶುದ್ಧಾತ್ಮನು ಇಳಿದು ಬಂದದ್ದನ್ನು ಕುರಿತು ಹೇಳುವಾಗ, ಮತ್ತಾಯ 3:16 "ದೇವರ ಆತ್ಮನಿಗೆ" ಉಲ್ಲೇಖಿಸುತ್ತಾನೆ. ಮಾರ್ಕ 1:10 ಮತ್ತು ಯೋಹಾನ 1:32 "ಆತ್ಮ" ಎಂದು ಹೇಳುತ್ತವೆ ಮತ್ತು ಲೂಕ 3:22 "ಪರಿಶುದ್ಧಾತ್ಮ" ಎಂದು ಹೇಳುತ್ತದೆ. "ದೇವರ ಆತ್ಮ" ಎಂಬುದು ಸಹ ಪರಿಶುದ್ಧಾತ್ಮನ ಬಗ್ಗೆ ಇತರ ಹೊಸ ಒಡಂಬಡಿಕೆಯ ವಾಕ್ಯ ಭಾಗಗಳಲ್ಲಿ ಉಪಯೋಗಿಸಲ್ಪಟ್ಟಿದೆ. (ರೋಮಾಪುರ 8:9, 14; 1 ಕೊರಿಂಥ 2:11, 14; 3:16; 6:11; 7:40; 12:3; 2 ಕೊರಿಂಥ 3:3; ಎಫೆಸ 4:30). (ಹಳೇ ಒಡಂಬಡಿಕೆಯಲ್ಲಿ "ದೇವರ ಆತ್ಮ" ಎಂಬುದು ಪುನಃ ಪುನಃ ಉಪಯೋಗಿಸಲ್ಪಟ್ಟಿದೆ: ಆದಿಕಾಂಡ 1:2; ವಿಮೋಚನಕಾಂಡ 31:3; 35:31; ಅರಣ್ಯಕಾಂಡ 24:2; 1 ಸಮುವೇಲ 11:6.)

**ಸಹಾಯಕ ಇಲ್ಲವೇ ಆದರಿಕ**

"ಸಹಾಯಕ" ಮತ್ತು "ಪರಿಶುದ್ಧಾತ್ಮ" ಎಂಬ ಮಾತುಗಳನ್ನು ಯೋಹಾನ

14:26 ವಚನವು ಅದಲು ಬದಲಾಗಿ ಉಪಯೋಗಿಸುತ್ತದೆ: "ಆದರೆ ಸಹಾಯಕನು ["ಆದರಿಕನು" KJV; "ಉಪದೇಶಕನು," NIV], ಪರಿಶುದ್ಧಾತ್ಮನು ...."

**ನಿತ್ಯದ ಆತ್ಮನು**

ಯೋಹಾನ 14:16, 17 "ಸಹಾಯಕ" ಮತ್ತು "ಸತ್ಯದ ಆತ್ಮ" ಎಂಬವು ಅದಲು ಬದಲಾಗಿ ಉಪಯೋಗಿಸಲ್ಪಟ್ಟಿವೆ. ಇದು ಯೋಹಾನ 15:26ರಲ್ಲಿಯೂ ಸತ್ಯವಾಗಿದೆ: "ಆದರೆ ತಂದೆಯ ಬಳಿಯಿಂದ ನಾನು ನಿಮಗೆ ಕಳುಹಿಸಿಕೊಡುವ ಸಹಾಯಕನು, ಅಂದರೆ ತಂದೆಯ ಬಳಿಯಿಂದ ಹೊರಡುವ ಸತ್ಯದ ಆತ್ಮನು, ಬಂದಾಗ ಆತನು ನನ್ನನ್ನು ಕುರಿತು ಸಾಕ್ಷಿ ಹೇಳುವನು."

**ಕರ್ತನ ಆತ್ಮನು**

ಲೂಕ 4:18ರಲ್ಲಿ ಯೇಸುವು, "ಕರ್ತನ ಆತ್ಮನು ನನ್ನ ಮೇಲಿದ್ದಾನೆ ..." ಎಂದು ಹೇಳಿದನು. ಅಪೊಸ್ತಲರ ಕೃತ್ಯ 5:9 ಸಹ "ಕರ್ತನ ಆತ್ಮ" ಎಂದು ಹೇಳುತ್ತದೆ (5:3ರಲ್ಲಿ "ಪರಿಶುದ್ಧಾತ್ಮ" ಎಂದು ಹೇಳಲ್ಪಟ್ಟಿದೆ). 2 ಕೊರಿಂಥ 3:17 ಓದಿರಿ. ("ಕರ್ತನ ಆತ್ಮನು" ಎಂದು ಅನೇಕ ಸಲ ಹಳೇ ಒಡಂಬಡಿಕೆ ಹೇಳುತ್ತದೆ - ಉದಾಹರಣೆ, ನ್ಯಾಯಸ್ಥಾಪಕರು 6:34; 11:29; 13:25; 14:6).

**ಯೇಸುವಿನ ಇಲ್ಲವೇ ಕ್ರಿಸ್ತನ ಆತ್ಮ**

ರೋಮಾಪುರ 8:9, "ಕ್ರಿಸ್ತನ ಆತ್ಮ" ಎಂದು ಹೇಳುತ್ತದೆ. ಗಲಾತ್ಯ 4:6ರಲ್ಲಿ "ಆತನ ಕುಮಾರನ ಆತ್ಮ" ಎಂದಿದೆ. ಫಿಲಿಪ್ಪಿ 1:19 ಮತ್ತು 1 ಪೇತ್ರ 1:11 ಸಹ ಓದಿರಿ. 2 ಪೇತ್ರ 1:20, 21ನ್ನು 1 ಪೇತ್ರ 1:11ಕ್ಕೆ ಹೋಲಿಸುವದರಿಂದ ಕ್ರಿಸ್ತನ ಆತ್ಮ ಮತ್ತು ಪರಿಶುದ್ಧಾತ್ಮ ಒಂದೇ ಎಂದು ತೀರ್ಮಾನಿಸುತ್ತೇವೆ.

ಪರಿಶುದ್ಧಾತ್ಮನ ಬಗ್ಗೆ ಚರ್ಚಿಸುವಲ್ಲಿ, ಆತನು ಭಿನ್ನವಾದ ಮಾತುಗಳಿಂದ ಉಲ್ಲೇಖಿಸಲ್ಪಟ್ಟಿದ್ದಾನೆಂಬುದನ್ನು ಅರಿತು ಕೊಳ್ಳುವುದು ನಮಗೆ ಮಹತ್ವವುಳ್ಳದ್ದಾಗಿದೆ. ಪರಿಶುದ್ಧ ಬರಹಗಳಲ್ಲಿ ಈ ವಿವಿಧ ಮಾತುಗಳು ಕಂಡು ಬರುವಾಗ ಪ್ರತಿಯೊಂದು ಸಲ ಪರಿಶುದ್ಧಾತ್ಮನು ಯೋಚನೆಯಲ್ಲಿದ್ದಾನೆಂದು ನಾವು ಸಿದ್ಧಪಡಿಸಿ ತೋರಿಸ ಬೇಕಾಗಿರುವದಿಲ್ಲ. ಹಿನ್ನೆಲೆಯಲ್ಲಿ ಬೇರೆ ಅರ್ಥವು ಬೇಕಾಗಿರದಿದ್ದಲ್ಲಿ ಆತನೇ ಎಂದು ಅರ್ಥವಾಗುವದೆಂಬುದರ ಬಗ್ಗೆ ನಾವು ನಿಶ್ಚಿತತೆಯುಳ್ಳವರಾಗಿರಬೇಕು.

# ಪರಿಶುದ್ಧಾತ್ಮನನ್ನು ದೂಷಿಸುವುದು

ಪರಿಶುದ್ಧಾತ್ಮನಿಗೆ ವಿರೋಧವಾಗಿರುವ ಎಲ್ಲಾ ಪಾಪಗಳಲ್ಲಿ ಬಹಳವಾಗಿ ಚರ್ಚಿಸಲ್ಪಟ್ಟದ್ದು, ಪರಿಶುದ್ಧಾತ್ಮನ ದೂಷಣೆಯಾಗಿದೆ. ಪರಿಶುದ್ಧಾತ್ಮನಿಗೆ ವಿರುದ್ಧವಾದ ದೂಷಣೆಯ ಬಗ್ಗೆ ಯೇಸುವು ಮಾತನಾಡಿದಾಗ ಆತನ ಅರ್ಥವೇನಾಗಿತ್ತು ಎಂಬುದರ ಬಗ್ಗೆ ಬಹಳವಾಗಿ ವಿವರಣೆಗಳು ಕೊಡಲ್ಪಟ್ಟಿವೆ. ನಾಲ್ಕು ಸುವಾರ್ತೆಗಳಲ್ಲಿ ಮೂರು ಸುವಾರ್ತೆಗಳು ಈ ಅಪರಾಧವನ್ನು ನಮೂದಿಸುತ್ತವೆ (ಮತ್ತಾಯ 12:31, 32; ಮಾರ್ಕ 3:28, 29; ಲೂಕ 12:9, 10).

ಇತರ ಬೈಬಲ್ ವಾಕ್ಯಗಳು ಪರಿಶುದ್ಧಾತ್ಮನ ದೂಷಣೆಗೆ ಸಂಬಂಧಿಸಿವೆ ಎಂದು ಕೆಲವರು ತಪ್ಪಾಗಿ ಬೋಧಿಸಿದ್ದಾರೆ. ಉದಾಹರಣೆಯಾಗಿ ಇಬ್ರಿಯ 6:4-6 ಮತ್ತು 1 ಯೋಹಾನ 5:16 ಒಂದು ಪ್ರತ್ಯೇಕ ಪಾಪವನ್ನು ಕುರಿತು ಹೇಳುತ್ತಿರುವದಿಲ್ಲ, ಇಲ್ಲದಿದ್ದರೆ ಬರಹಗಾರರು ಆ ಪಾಪದ ಹೆಸರನ್ನು ಹೇಳಬಹುದಿತ್ತು. ಅದರ ಬದಲು ವಚನಗಳು ಸಾಮಾನ್ಯ ಪಾಪದ ಬಗ್ಗೆ ಸಂಬಂಧಿಸಿರುತ್ತವೆ. ಇನ್ನೊಂದು ಕಡೆಯಲ್ಲಿ ಯೇಸುವು ಸ್ಪಷ್ಟವಾದ ಪಾಪದ ಬಗ್ಗೆ ಪರಿಶುದ್ಧಾತ್ಮನಿಗೆ ವಿರುದ್ಧವಾಗಿ ಕೆಟ್ಟದ್ದನ್ನು ಮಾತಾಡುವ ಪಾಪದ ಬಗ್ಗೆ ಮಾತಾಡುತ್ತಿದ್ದಾನೆ.

ಮತ್ತಾಯನಲ್ಲಿಯ ಹಿನ್ನೆಲೆಯು ಇತರರ ದೃಷ್ಟಿಯಲ್ಲಿ ಪವಿತ್ರಾತ್ಮನ ಗೌರವವನ್ನು ನೋಯಿಸುವ ಉದ್ದೇಶವು ಪರಿಶುದ್ಧಾತ್ಮನ ದೂಷಣೆಯಾಗಿದೆಯೆಂದು ಸೂಚಿಸುತ್ತದೆ. ಫರಿಸಾಯರು ಯೇಸುವಿನ ಕಾರ್ಯಗಳು ಇತರರನ್ನು ನಂಬಿಸಲು ಸೈತಾನನ ಶಕ್ತಿಯ ಮುಖಾಂತರ ಮಾಡಲ್ಪಡುತ್ತಿವೆಯೆಂದು ಯೇಸುವಿಗೆ ವಿರುದ್ಧವಾಗಿ ಮಾತಾಡುತ್ತಿದ್ದರು (ಮತ್ತಾಯ 12:24). ಯೇಸುವನ್ನು ಮತ್ತು ಆತನ ಬೋಧನೆಯನ್ನು ತಿರಸ್ಕರಿಸುವದನ್ನು ದಾಟಿ ಅವರು ಹೋಗಿದ್ದರು; ಅವರು ದೇವ ದೂಷಣೆ ಮಾಡುತ್ತಿದ್ದರು. ಈ ರೀತಿಯಲ್ಲಿ ತನ್ನ ವಿರುದ್ಧವಾಗಿ ಮಾತಾಡುವಂಥದ್ದು ಕ್ಷಮಿಸಲ್ಪಡಬಹುದೆಂದು ಯೇಸು ಸೂಚಿಸಿದನು (ಮತ್ತಾಯ 12:32).

ಪೌಲನು - ಅವನು ಸೌಲನೆಂದು ತಿಳಿಯಲ್ಪಟ್ಟಾಗ - ದೇವ ದೂಷಣೆ ಮಾಡುವ ಹಂತಕ್ಕೂ ಕ್ರೈಸ್ತರನ್ನು ಹಿಂಸಿಸುವದರಿಂದ ಯೇಸುವಿಗೆ ವಿರುದ್ಧವಾಗಿ ಕಾರ್ಯಮಾಡಿದನು (1 ತಿಮೊಥೆ 1:13-16), ಯೇಸುವಿಗೆ ವಿರುದ್ಧವಾಗಿ ದೇವ ದೂಷಣೆಗಾಗಿ ಕ್ಷಮಿಸಲ್ಪಟ್ಟ ಒಂದು ಉದಾಹರಣೆ ಅವನಾಗಿದ್ದಾನೆ.

ಅದಕ್ಕೆ ವ್ಯತಿರಿಕ್ತವಾಗಿ, ಕೆಟ್ಟ ಉದ್ದೇಶದಿಂದ ಪರಿಶುದ್ಧಾತ್ಮನಿಗೆ ವಿರೋಧವಾಗಿ ಮಾತಾಡಿದವರು ಕ್ಷಮಿಸಲ್ಪಡಲಾರರೆಂದು ಯೇಸುವು ಬೋಧಿಸಿದನು. ಇದನ್ನು ಮಾಡುವವರು ಕ್ರೈಸ್ತತ್ವದ ಮೂಲ ವಿಷಯಗಳಿಗಿಂತ ಹೆಚ್ಚಾದದ್ದನ್ನು ಅರ್ಥಮಾಡಿಕೊಳ್ಳಬೇಕು. ಪರಿಶುದ್ಧಾತ್ಮನ ಕಾರ್ಯವನ್ನು ಒಳಗೊಂಡು ಕೆಲವು ಉತ್ತಮವಾದ ಅಂಶಗಳನ್ನು ಅವರು ಅರ್ಥಮಾಡಿಕೊಳ್ಳತಕ್ಕದ್ದು. ಆತನಿಗೆ ವಿರೋಧವಾಗಿ ಮಾತಾಡುವದರಲ್ಲಿ, ಆತನ ಚಟುವಟಿಕೆಗಳನ್ನು ಅವರು ತಿರಸ್ಕರಿಸುವುದು ಮಾತ್ರವೇ ಅಲ್ಲ ಆದರೆ ಆತನ ಕಾರ್ಯವನ್ನು ಸೈತಾನನಿಗೆ ಆರೋಪಿಸುವದರಿಂದ ಆತನಿಂದ ಜನರು ದೂರ ಹೋಗುವಂತೆ ಮಾಡುತ್ತಾರೆ. ತಮ್ಮ ಪ್ರಯತ್ನಗಳ ಮೂಲಕ ತಮ್ಮ ಮೇಲೆ ಶಾಪವನ್ನು ತಂದುಕೊಳ್ಳುವರು ಹಾಗೂ ಅವರ ಬೋಧನೆಯನ್ನು ಸ್ವೀಕರಿಸಿದವರು ತಪ್ಪಿಹೋಗುವದಕ್ಕೆ ಕಾರಣರಾಗುವರು.

ದೇವದೂಷಣೆ ಮಾಡುವುದು ಪರಿಶುದ್ಧಾತ್ಮನ ವಾಕ್ಯವನ್ನು ತಿರಸ್ಕರಿಸುವದಕ್ಕಿಂತ

ಹೆಚ್ಚಿನದಾಗಿರುತ್ತದೆ. ಅದು ಆತನ ಕಾರ್ಯಗಳನ್ನು ತಿರಸ್ಕರಿಸಿ, ಆತನ ಕಾರ್ಯವು ಒಂದು ದುಷ್ಟ ಮೂಲದಿಂದ ಬರುತ್ತದೆಂದು ಇತರರಲ್ಲಿ ನಂಬಿಕೆ ಹುಟ್ಟಿಸುವಂತೆ ಪರಿಶುದ್ಧಾತ್ಮನಿಗೆ ವಿರೋಧವಾಗಿ ಮಾತನಾಡುವದಾಗಿರುತ್ತದೆ. ಇದನ್ನು ಯಾರು ಹಗುರ ವಾಗಿ ಮಾಡುವದಿಲ್ಲ. ಈ ರೀತಿಯಲ್ಲಿ ವರ್ತಿಸುವವನ ಹೃದಯದಲ್ಲಿ ದುಷ್ಟ ಉದ್ದೇ ಶವು ಇದ್ದೇ ಇರುತ್ತದೆ. ಈ ವರ್ತನೆಗೆ ಒಪ್ಪಿಸಿಕೊಟ್ಟಿರುವ ಯಾರೇ ಆಗಲಿ ಅವರು ಈ ಯುಗದಲ್ಲಿಯಾಗಲೀ, ಬರಲಿರುವ ಯುಗದಲ್ಲಿಯಾಗಲಿ ಕ್ಷಮಿಸಲ್ಪಡುವದೇ ಇಲ್ಲ; ಅವನು ನಿತ್ಯವಾದ ಪಾಪ ಮಾಡುತ್ತಿದ್ದಾನೆ (ಮಾರ್ಕ 3:29).

ಪರಿಶುದ್ಧಾತ್ಮನಿಗೆ ದೇವ ದೂಷಣೆ ಮಾಡುವುದು ಮೂರು ಅಪರಾಧಗ ಳನ್ನು ಒಳಗೊಂಡಿರುತ್ತದೆ: (1) ಪರಿಶುದ್ಧಾತ್ಮನ ಕಡೆಗೆ ದುಷ್ಟಕರವಾದ ಮನೋ ಭಾವನೆಯಿರುವುದು, (2) ಆತನ ಬಗ್ಗೆ ಇತರರಿಗೆ ಕೆಟ್ಟದ್ದನ್ನು ಮಾತಾಡುವುದು, ಹಾಗೂ (3) ಆತನ ಕಾರ್ಯವನ್ನು ತಿರಸ್ಕರಿಸಲು ಮತ್ತು ಅದು ದುಷ್ಟ ಮೂಲದಿಂದ ಬರುವಂತೆ ನಂಬಲು ಇತರರ ಮೇಲೆ ಪ್ರಭಾವ ಬೀರಲು ಹುಡುಕುವುದು.

---

## ಪರಿಶುದ್ಧಾತ್ಮ ಮತ್ತು ಯೇಸು

ಪರಿಶುದ್ಧಾತ್ಮನ ಕಾರ್ಯದ ಉದ್ದೇಶವು ಯೇಸುವನ್ನು ಮರೆಮಾಡಲಿಕ್ಕಾಗಿರಲಿಲ್ಲ, ಆದರೆ ಆತನನ್ನು ಮಹಿಮೆ ಪಡಿಸುವುದು ಮತ್ತು ಹೆಚ್ಚಿಸುವುದು ಆಗಿತ್ತು. “ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ... ನನ್ನನ್ನೇ ಮಹಿಮೆ ಪಡಿಸುವನು” (ಯೋಹಾನ 16:13, 14) ಎಂದು ಯೇಸು ಹೇಳಿದನು. ತನ್ನ ಕಡೆಯಲ್ಲ, ಆದರೆ ಯೇಸುವಿನ ಕಡೆಗೆ ತೋರಿಸುವ ಬಾಪ್ತಿಸ್ಮ ಯೋಹಾನನಂತೆ (ಯೋಹಾನ 1:26, 27) ಆತ್ಮನು ಯೇಸುವನ್ನು ಮಹಿಮೆ ಪಡಿಸುವನು. ಆದರಿಂದ ಆತನು ಎಲ್ಲಾ ಗೌರವವನ್ನೂ ಮಹಿಮೆಯನ್ನೂ ಬಲವನ್ನೂ ಹೊಂದುವನು (ಪ್ರಕಟನೆ 4:11).

# ಯೇಸುವು ಬದಲಾಗದೇ ಇರುವನು

"ಯೇಸು ಕ್ರಿಸ್ತನು ನಿನ್ನೆ ಇದ್ದ ಹಾಗೆ ಈ ಹೊತ್ತೂ ಇದ್ದಾನೆ, ನಿರಂತರವೂ ಹಾಗೆಯೇ ಇರುವನು" (ಇಬ್ರಿಯ 13:8) ಎಂಬ ಹೇಳಿಕೆಯ ಕಾರಣದಿಂದ ಇಂದೂ ಸಹ ಸೂಚಕ ಕಾರ್ಯಗಳೂ ಮಹತ್ಕಾರ್ಯಗಳೂ ಮುಂದರಿಯುವವು ಎಂದು ಕೆಲವು ಧಾರ್ಮಿಕ ಗುಂಪುಗಳು ನಿರೀಕ್ಷಿಸುತ್ತವೆ. ಈ ರೀತಿಯ ತೀರ್ಮಾನವು ಸರಿಯಾದದ್ದಾಗಿರುವದಿಲ್ಲ; ಯಾಕಂದರೆ ಈ ವಾಕ್ಯಭಾಗವು ಅದ್ಭುತ ಕಾರ್ಯಗಳ ಬಗ್ಗೆ ಚರ್ಚಿಸುವದಿಲ್ಲ. ಆದರೆ ತನ್ನ ಜನರಿಗೋಸ್ಕರವಾಗಿ ದೇವರ ಪರಿಪಾಲನೆಯ ಮತ್ತು ನಿರಂತರವಾದ ಲಕ್ಷ್ಯವಿಡುವಿಕೆಯ ಬಗ್ಗೆ ಹೇಳುತ್ತಲಿದೆ (ಇಬ್ರಿಯ 13:5, 6). ಇದಲ್ಲದೆ, ಯೇಸುವಿನ ಅಸ್ತಿತ್ವದ ಎಲ್ಲಾ ವಿಷಯಗಳನ್ನು, ಇಲ್ಲವೇ ಚಟುವಟಿಕೆಗಳಿರುವಂಥದ್ದನ್ನು, ಯಾವಾಗಲೂ ಒಂದೇ ರೀತಿಯಲ್ಲಿ ಇರುವಂಥ ಈ ವಾಕ್ಯವು ಬೋಧಿಸುವದಿಲ್ಲ. ಪ್ರತಿಯೊಂದು ಅರ್ಥದಲ್ಲಿ ಯೇಸುವು ಯಾವಾಗಲೂ ಒಂದೇ ರೀತಿಯಲ್ಲಿ ಇರುವದಿಲ್ಲ; ಉದಾಹರಣೆಯಾಗಿ, ಆತನು ಭೂಲೋಕಕ್ಕೆ ಬಂದು ಮಾನವ ದೇಹವನ್ನು ತೆಗೆದು ಕೊಳ್ಳುವದಕ್ಕಿಂತ ಮೊದಲು ಆತ್ಮನ ರೂಪದಲ್ಲಿ ಆತನು ಅಸ್ತಿತ್ವದಲ್ಲಿದ್ದನು (ಯೋಹಾನ 1:14; ಇಬ್ರಿಯ 10:5ಸಿ) ಮತ್ತು ಅನಂತರ ಆತನು ತಂದೆಯ ಬಳಿಗೆ ಏರಿಹೋದಾಗ ತನ್ನ ಮೂಲ ಸ್ವಭಾವವನ್ನು ಹೊಂದಿಕೊಂಡನು (ಯೋಹಾನ 17:5) ಈಗ ಯೇಸು ಭೂಮಿಯ ಮೇಲೆ ವ್ಯಕ್ತಿಯಾಗಿ ಇರುವದಿಲ್ಲ, ಇಲ್ಲವೇ ಆತನು ದೇವರ ಕುಮಾರನು ಎಂದು ನಾವು ನಂಬಲಿಕ್ಕಾಗುವಂತೆ ಅದ್ಭುತ ಕಾರ್ಯಗಳನ್ನು ಮಾಡಲು ವ್ಯಕ್ತಿಯಾಗಿ ಆತನು ಪುನಃ ಬರುವದಿಲ್ಲ. ಭೂಲೋಕದಲ್ಲಿದ್ದಾಗ ಆ ಉದ್ದೇಶಕ್ಕಾಗಿ ಸೂಚಕ ಕಾರ್ಯಗಳನ್ನೂ ಮಹತ್ಕಾರ್ಯಗಳನ್ನೂ ಮಾಡಿದನು, ಮತ್ತು ನಾನು ನಂಬಲಿಕ್ಕಾಗುವಂತೆ ದಾಖಲೆ ಮಾಡಲ್ಪಟ್ಟವು (ಯೋಹಾನ 20:30, 31). ಅದರಂತೆಯೇ, ಶಿಲುಬೆಯ ಮೇಲಿನ ಆತನ ವಿಮೋಚನಾ ಮರಣವು ಮುಂದುವರಿಯುವ ಕಾರ್ಯವಲ್ಲ, ಆದರೇ ಒಂದೇ ಸಲ ಎಲ್ಲಾ ಸಮಯಕ್ಕಾಗಿ ನೆರವೇರಿಸಲ್ಪಟ್ಟಿತು ಹಾಗೂ ಎಂದೂ ಪುನರಾವರ್ತನೆಗೊಳ್ಳುವದಿಲ್ಲ (ಇಬ್ರಿಯ 1:3; 7:27; 9:12, 24-26; 10:12-14).

ದೇಹದ ಹೊರಗೆ ಯೇಸುವಿನ ಚಟುವಟಿಕೆಗಳು ಯಾವಾಗಲೂ ಒಂದೇ ಯಾಗಿರುವದಿಲ್ಲ. ಆತನು ಪ್ರತಿಯೊಂದನ್ನು (ಯೋಹಾನ 1:3; ಕೊಲೊಸ್ಸೆ 1:16) ಆರು ದಿನಗಳಲ್ಲಿ (ಆದಿಕಾಂಡ 2:2; ವಿಮೋಚನಕಾಂಡ 20:11) ಸೃಷ್ಟಿಸಿದನು. ಪೂರ್ತಿಗೊಳಿಸಿದ ಕಾರ್ಯವು ನಾವು ತಿಳಿದ ಪ್ರಕಾರವಾಗಿ ಪುನರಾವರ್ತಿಸಲ್ಪಟ್ಟಿಲ್ಲ. ಸೃಷ್ಟಿಯ ಅದ್ಭುತಕಾರ್ಯದ ಮೂಲಕವಾಗಿ, ಯೇಸುವು ತನ್ನ ಅಸ್ತಿತ್ವವನ್ನೂ ಮಹಿಮೆಯನ್ನೂ ಮಾನವ ಕುಲಕ್ಕೆ ಸಿದ್ಧಪಡಿಸಿ ತೋರಿಸಿದ್ದಾನೆ (ರೋಮಾಪುರ 1:19, 20; ಕೀರ್ತನೆ 19:1; ಯೋಹಾನ 1:1-3). ಆತನು ಎಲ್ಲಾ ಸತ್ಯವನ್ನು ಪ್ರಕಟಿಸಿದ್ದಾನೆ (ಯೋಹಾನ 14:26; 16:13; ಯೂದ 3) - ಅದಕ್ಕೆ ಕೂಡಿಸುವ ಇಲ್ಲವೇ ಅದನ್ನು ಬದಲಾಯಿಸುವ ಅಗತ್ಯತೆಯಿರುವದಿಲ್ಲ (ಗಲಾತ್ಯ 1:8, 9; ಪ್ರಕಟನೆ 22:18, 19) - ಆತನು ಹೊಸ ಸತ್ಯವನ್ನು ಪ್ರಕಟಿಸುವದನ್ನು ಮುಂದುವರಿಸುವದಿಲ್ಲ.

ಯೇಸುವು ತನ್ನ ವ್ಯಕ್ತಿತ್ವದಲ್ಲಿ ಮತ್ತು ನಮಗಾಗಿರುವ ಆತನ ಜೋಪಾನ ಮಾಡುವದರಲ್ಲಿ ದೃಢವಾಗಿರುತ್ತಾನೆ, ಆದರೆ ಇದು ಆತನು ನೂತನ ಜಗತ್ತುಗಳನ್ನು ಸೃಷ್ಟಿಸುತ್ತಾನೆ, ನಮ್ಮ ಪಾಪಗಳಿಗಾಗಿ ಪುನಃ ಸಾಯುತ್ತಾನೆ, ಪುನಃ ಪುನರುತ್ಥಾನ ಹೊಂದುತ್ತಾನೆ, ಇಲ್ಲವೇ ಪುನಃ ನೀರಿನ ಮೇಲೆ ನಡೆಯುತ್ತಾನೆ, ಕೆಲವು ರೊಟ್ಟಿ

ಮೀನುಗಳಿಂದ ಹೆಚ್ಚು ಜನಸಮೂಹಗಳಿಗೆ ಊಟಮಾಡಿಸುತ್ತಾನೆ, ಇಲ್ಲವೇ ನಾವು ಆತನಲ್ಲಿ ನಂಬಲಿಕ್ಕಾಗುವಂತೆ ಯಾವುದೇ ತನ್ನ ದೊಡ್ಡ ಅದ್ಭುತಕಾರ್ಯಗಳನ್ನು ಪುನಃ ಮಾಡುತ್ತಾನೆ ಎಂದು ಅರ್ಥವಾಗುವದಿಲ್ಲ. ನಮ್ಮ ನಂಬಿಕೆಯು ಸೂಚಕ ಕಾರ್ಯಗಳನ್ನು ನೋಡುವದರ ಮೇಲೆ ಅವಲಂಭಿಸಿರುವದಿಲ್ಲ. ನಾವು ನೋಡದಿದ್ದಾಗ್ಯೂ ದೇವರ ಲಿಖಿತ ಸಾಕ್ಷಿಯನ್ನು ನಂಬಿದರೆ, ನಾವು ಆಶೀರ್ವದಿಸಲ್ಪಡುತ್ತೇವೆ (ನೋಡಿರಿ ಯೋಹಾನ 20:29ಬಿ). ಆತನು ಕ್ರಿಸ್ತನು, ದೇವರ ಕುಮಾರನು ಎಂದು ನಂಬಲಿಕ್ಕಾಗುವಂತೆ, ಆನಂತರದ ಸಂತತಿಯವರೂ ನಾವೂ ವಿಶ್ವಾಸಿಸಲಿಕ್ಕಾಗುವಂತೆ ಆತನ ಅದ್ಭುತ ಕಾರ್ಯಗಳು ನಡಿಸಲ್ಪಟ್ಟವು ಮತ್ತು ದಾಖಲೆ ಮಾಡಲ್ಪಟ್ಟಿರುವವು (ಯೋಹಾನ 20:30, 31).

ಪೇತ್ರನ ಮುಖಾಂತರವಾಗಿ, "ಮಹತ್ತುಗಳಿಂದಲೂ ಅದ್ಭುತ ಕಾರ್ಯಗಳಿಂದಲೂ ಸೂಚಕ ಕಾರ್ಯಗಳಿಂದಲೂ" (ಅಪೊಸ್ತಲರ ಕೃತ್ಯ 2:22) ಪಂಚಾಶತ್ತಮ ದಿನದಂದು ದೇವರು ಯೇಸುವನ್ನು ಒಪ್ಪಿಕೊಂಡಿದ್ದನೆಂಬುದಕ್ಕೆ ಸಾಕ್ಷಿಕೊಟ್ಟನು. ಯೇಸುವಿನಲ್ಲಿ ನಂಬಿಕೆಯಿಡದವರು ಯೇಸುವನ್ನು ಕುರಿತಾದ ದೇವರ ಸಾಕ್ಷಿಯ ಬಗ್ಗೆ ಸಂಶಯ ಪಡುತ್ತಾರೆ; "... ದೇವರನ್ನು ನಂಬದವನು ಆತನನ್ನು ಸುಳ್ಳುಗಾರನನ್ನಾಗಿ ಮಾಡಿದ್ದಾನೆ. ಹೇಗಂದರೆ ದೇವರು ತನ್ನ ಮಗನ ವಿಷಯವಾಗಿ ಹೇಳಿರುವ ಸಾಕ್ಷಿಯಲ್ಲಿ ಅವನು, ನಂಬಿಕೆಯಿಡಲಿಲ್ಲ" (1 ಯೋಹಾನ 5:10 ಒತ್ತಿ ಹೇಳಿದ್ದು ನನ್ನದು). ಸಾಕ್ಷಿ ಕೊಡುವದನ್ನು ದೇವರು ಮುಂದುವರಿಸುವಂತೆ ದೇವರು ಸಾಕ್ಷಿ "ಕೊಡುತ್ತಿರುವದನ್ನು" ಈ ವಚನದಲ್ಲಿ ಉಲ್ಲೇಖಿಸಲ್ಪಟ್ಟಿರುವದಿಲ್ಲ. ಆತನು "ಕೊಟ್ಟಿದ್ದಾನೆ" ಎಂದು ಹೇಳುತ್ತದೆ (ಗ್ರೀಕ: *memartureken* ಪರಿಪೂರ್ಣ, ಸೂಚನಾತ್ಮಕ, ಕಾರ್ಯಾತ್ಮಕ ಕ್ರಿಯಾ ಪದವಾಗಿದೆ). ಕಾರ್ಯವು ಪೂರ್ತಿಗೊಳಿಸಲ್ಪಟ್ಟಿದೆ ಆದರೆ ಪರಿಣಾಮಗಳು ಮುಂದುವರಿಸಲ್ಪಟ್ಟಿವೆ ಎಂಬುದನ್ನು ಸೂಚಿಸುತ್ತದೆ. ಯೇಸುವಿನ ಬಗ್ಗೆ ಸಾಕ್ಷಿ ಹೇಳುವದನ್ನು ದೇವರು ಮುಕ್ತಾಯಗೊಳಿಸಿದ್ದಾನೆ ಆದರೆ ಈ ಸಾಕ್ಷಿಯು ವಿಶ್ವಾಸವನ್ನು ಹುಟ್ಟಿಸುವದಕ್ಕಾಗಿ ಇನ್ನೂ ಅಸ್ತಿತ್ವದಲ್ಲಿರುತ್ತದೆ ಎಂಬುದನ್ನು ಈ ಕ್ರಿಯಾಪದವು ಸೂಚಿಸುತ್ತದೆ. ಉತ್ಪಾದಿಸಲ್ಪಡುವದಕ್ಕಾಗಿ ಮುಂದುವರಿಯುವ ವಿಶ್ವಾಸವು ಯೇಸುವಿನ ಅದ್ಭುತಕಾರ್ಯಗಳ ಮುಖಾಂತರ ದೇವರ ಹಿಂದಿನ ಸಾಕ್ಷಿಯ ಕಾರಣದಿಂದ, ಆತನ ಕಾರ್ಯಗಳ ಲಿಖಿತ ದಾಖಲೆಯ ಮುಖಾಂತರ ಮುಂದುವರಿದ ಪರಿಣಾಮಗಳಿರುತ್ತವೆ (ಯೋಹಾನ 20:30, 31).

© 2009 Truth for Today